3. ರವಾನೆ ಮಾಡಿದ ವಿದ್ಯುತ್ ಪ್ರಮಾಣವು ಸ್ವೀಕರಿಸಿದ ವಿದ್ಯುತ್ ಪ್ರಮಾಣಕ್ಕಿಂತ ಕಡಿಮೆ ಇದ್ದರೆ, ಮೇ.ಸೌ.ಶ.ಪಿ.ವಿ.ವ್ಯವಸ್ಥೆಯ ಗ್ರಾಹಕರು ಬೆ.ವಿ.ಕಂಪನಿಗೆ, ಸ್ವೀಕರಿಸಿದ ನಿವ್ವಳ ವಿದ್ಯುತ್ ಪ್ರಮಾಣಕ್ಕೆ ಕ.ವಿ.ನಿ.ಆಯೋಗವು ಕಾಲಕಾಲಕ್ಕೆ ನಿರ್ಧರಿಸುವ, ಪ್ರಚಲಿತ ಚಾಲ್ತಿ ವಿದ್ಯುತ್ ದರಗಳ ಪ್ರಕಾರ ವಿದ್ಯುತ್ ಬಳಕೆ ಶುಲ್ಕವನ್ನು ಪಾವತಿಸಬೇಕಾಗುತ್ತದೆ.

ಅಪೆಕ್ಸ್ ಬ್ಯಾಂಕಿನ ಶಾಖೆಗಳು

1863(1087); ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮಿ ಲೇಔಟ್)

ಅ) ಬೆಂಗಳೂರು ನಗರದಲ್ಲಿ ಎಲ್ಲೆಲ್ಲಿ ಅಪೆಕ್ಸ್ ಬ್ಯಾಂಕಿನ ಶಾಖೆಗಳು ಕಾರ್ಯ ನಿರ್ವಹಿಸುತ್ತಿವೆ ಹಾಗೂ ಈ ಶಾಖೆಗಳನ್ನು ಬೆಂಗಳೂರು ನಗರದಲ್ಲಿ ಮಾತ್ರ ತೆರೆಯಲು ಕಾರಣಗಳೇನು?

ಆ) ಇವುಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳೆಷ್ಟು ಹಾಗೂ ಪ್ರತಿ ತಿಂಗಳು ಸಿಬ್ಬಂದಿ ಸಂಬಳ, ಬಾಡಿಗೆ ಇತ್ಯಾದಿಗಳ ಖರ್ಚು ಎಷ್ಟು?

ಇ) ಎಲ್ಲಾ ವ್ಯವಹಾರಗಳಿಗೂ ರಾಷ್ಟ್ರೀಕೃತ ಬ್ಯಾಂಕಿನ ಖಾತೆಯ ಅವಶ್ಯಕತೆ ಇರುವುದರಿಂದ ಈ ಶಾಖೆಗಳಿಗೆ ಹೆಚ್ಚು ವ್ಯವಹಾರವಾಗದೇ ಇರುವುದು ನಿಜವೇ?

ಈ) ಎಲ್ಲಾ ಬಡಾವಣೆಗಳಲ್ಲೂ ಹಲವಾರು ರಾಷ್ಟ್ರೀಕೃತ ಬ್ಯಾಂಕಿನ ಶಾಖೆಗಳಿರುವುದರಿಂದ ಕೆಲವು ಶಾಖೆಗಳನ್ನು ಮುಚ್ಚಲು ಸರ್ಕಾರ ಆಲೋಚಿಸಿದೆಯೇ?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಮಾನ್ಯ ಸಹಕಾರ ಸಚಿವರು)

ಅ) ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು ನಗರದಲ್ಲಿ 42 ಶಾಖೆಗಳ ಮೂಲಕ ಕಾರ್ಯನಿರ್ವಹಿಸುತ್ತಿದೆ. ವಿವರವನ್ನು **ಅನುಬಂಧದಲ್ಲಿ** ಲಗತ್ತಿಸಿದೆ.

ಅಪೆಕ್ಸ್ ಬ್ಯಾಂಕ್ ಕೇಂದ್ರ ಸರ್ಕಾರ ನಬಾರ್ಡಿನ ಮೂಲಕ ಒದಗಿಸುತ್ತಿರುವ ಪುನರ್ಧನದ ಯೋಜನೆ ಹಾಗೂ ರಾಜ್ಯ ಸರ್ಕಾರದ ರೈತಪರ ಯೋಜನೆಗಳನ್ನು ರಾಜ್ಯದ 21 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಮೂಲಕ ಅನುಷ್ಠಾನಗೊಳಿಸುತ್ತಿದ್ದು, ರಾಜ್ಯದ ರೈತರ ಅಲ್ಪಾವಧಿ ಕೃಷಿ ಸಾಲದ ಅಗತ್ಯತೆಗಳನ್ನು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಮೂಲಕ ಪೂರೈಸುತ್ತಿದೆ. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಗೆ ಪೈಪೋಟಿ ನೀಡದಿರುವ ಉದ್ದೇಶದಿಂದ ಅಪೆಕ್ಸ್ ಬ್ಯಾಂಕಿನ ಶಾಖೆಗಳನ್ನು ಬೆಂಗಳೂರು ನಗರದಲ್ಲಿ ಮಾತ್ರ ತೆರೆಯಲಾಗಿದೆ.

ಆ) ಅಪೆಕ್ಸ್ ಬ್ಯಾಂಕಿನಲ್ಲಿ ಒಟ್ಟು 470 ಜನ ಸಿಬ್ಬಂದಿಗಳಿದ್ದು, ಈ ಪೈಕಿ 330 ಜನ ಸಿಬ್ಬಂದಿಗಳು ಶಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರ ಪ್ರತಿ ತಿಂಗಳ ಸಂಬಳವು ₹ 226.70 ಲಕ್ಷ ಹಾಗೂ ಮಾಸಿಕ ಶಾಖೆಗಳ ಕಟ್ಟಡದ ಬಾಡಿಗೆಯು ₹ 12.69 ಲಕ್ಷಗಳಾಗಿರುತ್ತದೆ.

ಇ) ರಾಷ್ಟ್ರೀಕೃತ ಬ್ಯಾಂಕಿನಲ್ಲಿ ನೀಡುತ್ತಿರುವ ಎಲ್ಲಾ ಸೌಲಭ್ಯಗಳನ್ನು ಅಪೆಕ್ಸ್ ಬ್ಯಾಂಕಿನ ಶಾಖೆಗಳಲ್ಲೂ ನೀಡುತ್ತಿರುವುದರಿಂದ ಬ್ಯಾಂಕಿನ ಎಲ್ಲಾ ಶಾಖೆಗಳ ವ್ಯವಹಾರವು ಉತ್ತಮವಾಗಿದೆಯೆಂದು ವರದಿಯಾಗಿದೆ.

ಈ) ಅಪೆಕ್ಸ್ ಬ್ಯಾಂಕಿನ ಶಾಖೆಗಳು ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಎಲ್ಲಾ ಶಾಖೆಗಳಲ್ಲಿ ಉತ್ತಮವಾದ ಕಾರ್ಯವ್ಯವಹಾರ ನಡೆಯುತ್ತಿರುವುದರಿಂದ ಶಾಖೆಗಳನ್ನು ಮುಚ್ಚುವ ಪ್ರಶ್ನೆ ಉದ್ಭವಿಸುವುದಿಲ್ಲ.

ಅನುಬಂಧ

ಅಪೆಕ್ಸ್ ಬ್ಯಾಂಕಿನ ಶಾಖೆಗಳ ಪಟ್ಟಿ

ಕ್ರ ಸಂ	ಶಾಖೆಯ ಹೆಸರು	ಕ್ರ ಸಂ	ಶಾಖೆಯ ಹೆಸರು
1	ಅಶೋಕ ಸ್ತಂಭ	22	ಶಾಸಕರ ಭವನ
2	ಬನಶಂಕರಿ 1ನೇ ಹಂತ	23	ಮಾಗಡಿ ರಸ್ತೆ
3	ಬಸವೇಶ್ವರನಗರ	24	ಬಹುಮಹಡಿಗಳ ಕಟ್ಟಡ
4	ಬೊಮ್ಮಸಂದ್ರ	25	ಮಹಾಲಕ್ಷ್ಮೀಪುರಂ
5	ಬಿ.ಟಿ.ಎಂ. ಲೇಔಟ್,	26	ಮಹಾದೇವಪುರ
6	ಬನಶಂಕರಿ 3ನೇ ಹಂತ	27	ಎನ್ ಜಿ ಇ ಎಫ್ ಪೂರ್ವ
7	ಚಂದ್ರ ಲೇಔಟ್	28	ಪದ್ಮನಾಭನಗರ
8	ಗಿರಿನಗರ	29	ಪಿ ಯು ಬಿ
9	ಗೋಕುಲ	30	ರಾಜಾಜಿನಗರ
10	ಗಾಂಧಿನಗರ	31	ಆರ್ ಪಿ ಸಿ ಲೇಔಟ್
11	ಗಂಗಾನಗರ	32	ಆರ್ ಟಿ ನಗರ
12	ಪ್ರಧಾನ ಕಛೇರಿ	33	ಆರ್ ಆರ್ ನಗರ
13	ಹೆಚ್. ಎಸ್. ಆರ್. ಅಗರ	34	ಶಿವಾಜಿನಗರ
14	ಇಂದಿರಾನಗರ	35	ಸುಂಕದಕಟ್ಟೆ
15	ಜಯನಗರ ಕಾಂಪ್ಲೆಕ್ಸ್	36	ಟಿ ದಾಸರಹಳ್ಳಿ
16	ಜಯನಗರ 9ನೇ ಬ್ಲಾಕ್	37	ಧಣಿಸಂದ್ರ
17	ಜೆ ಪಿ ನಗರ	38	ವಿಧಾನಸೌಧ
18	ಕೆಂಗೇರಿ ಉಪನಗರ	39	ವಿಜಯನಗರ
19	ಕೆ. ಆರ್. ಪುರಂ	40	ವಿವೇಕಾನಂದ ಕಾಲೇಜು
20	ಕೋರಮಂಗಲ	41	ವೈಯಾಲಿಕಾವಲ್
21	ಲಕ್ಕಸಂದ್ರ	42	ಯಲಹಂಕ